# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಸೋಮನಹಳ್ಳಿ ಕೃಷಿ ಕ್ಷೇತ್ರದ 10 ಎಕರೆ ಜಮೀನಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣಕ್ಕೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ:- 1. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಪತ್ರ ಸಂಖ್ಯೆ:ಎಲ್ಎನ್‌ಡಿ(1)51/2018-19 ದಿನಾಂಕ 10-07-2018.

2. ಕೃಷಿ ನಿರ್ದೇಶಕರವರ ಪತ್ರ ಸಂಖ್ಯೆ:ಎಸ್ಎಫ್ಎಸ್-3/ರಾಕ್ಷೇ/ಸೋ.ಕೃಕ್ಷೇ/ಮೊ.ದೇ.ಶಾ/2017-18 ದಿನಾಂಕ: 25-09-2018.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ಮಂಡ್ಯ ಜಿಲ್ಲೆ ಮದ್ದೂರು ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಸುಸಜ್ಜಿತವಾದ ಸೌಲಭ್ಯಗಳಿಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದರಿಂದ ಸೋಮನಹಳ್ಳಿ ಕೃಷಿ ಕ್ಷೇತ್ರಕ್ಕೆ ಸೇರಿದ 10 ಎಕರೆ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣಕ್ಕೆ ಮಂಜೂರು ಮಾಡಲು ಸದರಿ ಜಮೀನಿನ ಆರ್.ಟಿ.ಸಿ.ಯಂತೆ ಸೋಮನಹಳ್ಳಿ ಕೃಷಿ ಫಾರಂಗೆ ಸೇರಿದ ಜಮೀನಾಗಿರುತ್ತದೆ. ಈ ಜಮೀನು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣಕ್ಕೆ ಯೋಗ್ಯವಾದ ಜಮೀನಾಗಿರುವುದರಿಂದ ಸದರಿ 10 ಎಕರೆ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕೃಷಿ ನಿರ್ದೇಶಕರವರು, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಸೋಮನಹಳ್ಳಿ ಕ್ಷೇತ್ರದಲ್ಲಿ ಸುಮಾರು 34 ಎಕರೆ ಜಮೀನಿನ ಪೈಕಿ 10 ಎಕರೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯಲು ಯೋಗ್ಯವಾಗಿರುವುದಿಲ್ಲವೆಂದು ಹಾಗೂ ಸದರಿ ಜಮೀನು ಖುಷ್ಕಿ ಜಮೀನು ಆಗಿದ್ದು, ಕಾಲಕಾಲಕ್ಕೆ ಮಳೆಯಾಗದಿರುವುದರಿಂದ ಹಾಗೂ ನೀರಿನ ಅನುಕೂಲತೆ ಇಲ್ಲದೇ ಇರುವುದರಿಂದ ಈಗಾಗಲೇ ಸುಮಾರು 3 ವರ್ಷಗಳಿಂದ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ಈ ಕೆಳಕಂಡ ಸರ್ವೆ ನಂಬರ್ ವಿಸ್ತೀರ್ಣದ ಜಮೀನುಗಳ ಒಟ್ಟು 10 ಎಕರೆ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಬಹುದೆಂದು ತಿಳಿಸಿರುತ್ತಾರೆ.

(ಎಕರೆ-ಗುಂಟೆಗಳಲ್ಲಿ)

| ಕ್ರ.ಸಂ. | ಸರ್ವೆ ನಂಬರ್ | ವಿಸ್ತೀರ್ಣ |
|---|---|---|
| 1 | 79/1 | 0.16 |
| 2 | 79/3 | 0.02 |
| 3 | 79/5 | 0.09 |
| 4 | 79/6 | 0.08 |
| 5 | 79/7 | 1.30 |
| 6 | 80/1 | 1.00 |
| 7 | 80/2 | 1.00 |
| 8 | 83/2 | 1.14 |
| 9 | 84 | 1.34 |
| 10 | 85/1 | 0.10 |

..2)

| | | |
|---|---|---|
| 11 | 85/2 | 0.0908 |
| 12 | 85/3 | 1.10 |
| 13 | 86/1 | 0.05 |
| 14 | 86/2 | 0.12 |
| 15 | 87/10 | 0.03 |
| 16 | 87/10 | 0.03 |
| 17 | 87/12 | 0.05 |
| 18 | 83/3 | 0.28 |
| 19 | 100/3 | 0.0208 |

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಪ್ರಸ್ತಾಪಿತ ಮುರಾರ್ಜಿ ದೇಸಾಯಿ ವಸತಿ ಶಾಲೆಯ ನಿರ್ಮಾಣಕ್ಕೆ 7.21 ಎಕರೆ ಜಮೀನನ್ನು ಮಾತ್ರ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲು ಹಾಗೂ ಸದರಿ ಜಮೀನಿಗೆ ಬದಲಾಗಿ ಕೃಷಿ ಯೋಗ್ಯ 7.21 ಎಕರೆ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯು ಕೃಷಿ ಇಲಾಖೆಗೆ ಒದಗಿಸುವ ಷರತ್ತಿನೊಂದಿಗೆ ಪ್ರಸ್ತಾಪಿತ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಸೋಮನಹಳ್ಳಿ ಕೃಷಿ ಕ್ಷೇತ್ರದ ಕೃಷಿ ಇಲಾಖೆಯ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂ: ಕೃಇ 66 ಕೃಇಕ 2018, ಬೆಂಗಳೂರು, ದಿನಾಂಕ: 16-01-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಸೋಮನಹಳ್ಳಿ ಕೃಷಿ ಕ್ಷೇತ್ರಕ್ಕೆ ಸೇರಿದ ಕೃಷಿ ಇಲಾಖೆಯ ಕೆಳಕಂಡ ಸರ್ವೆ ನಂಬರ್‌ಗಳಲ್ಲಿ ಲಭ್ಯವಿರುವ ಒಟ್ಟು 7 ಎಕರೆ 21 ಗುಂಟೆ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆಗೆ ಕೆಳಕಂಡ ಷರತ್ತುಗೊಳಪಟ್ಟು ವರ್ಗಾಯಿಸಿ ಆದೇಶಿಸಲಾಗಿದೆ.

(ಎಕರೆ-ಗುಂಟೆಗಳಲ್ಲಿ)

| ಕ್ರ.ಸಂ. | ಸರ್ವೆ ನಂಬರ್ | ವಿಸ್ತೀರ್ಣ |
|---|---|---|
| 1 | 79/7 | 1.31 |
| 2 | 80/1 | 1.00 |
| 3 | 80/2 | 1.00 |
| 4 | 84 | 1.35 |
| 5 | 85/1 | 0.10 |
| 6 | 85/2 | 0.095 |
| 7 | 85/3 | 0.10 |
| 8 | 86/1 | 0.05 |
| 9 | 83/3 | 0.28 |

**ಷರತ್ತುಗಳು:**

1) ಸದರಿ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣದ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಹಸ್ತಾಂತರಿಸಲಾಗಿದೆ.

..3)

2) ಜಮೀನಿನ ಯಾವುದೇ ಭಾಗವನ್ನು ಬೇರೊಬ್ಬರಿಗೆ ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನಾಗಲೀ ಮಾಡಬಾರದು.

3) ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣಕ್ಕೆ ನೀಡಲಾಗಿರುವ ಜಮೀನು ಅಗತ್ಯವಿಲ್ಲವೆಂಬ ಸಂದರ್ಭದಲ್ಲಿ ಈ ಜಮೀನಿನಲ್ಲಿ ಕೈಗೊಂಡಿರುವ ಮೂಲಭೂತ ಸೌಕರ್ಯಗಳು / ಕಟ್ಟಡ ನಿರ್ಮಾಣಗಳೊಂದಿಗೆ ಉಚಿತವಾಗಿ ಕೃಷಿ ಇಲಾಖೆಗೆ ಹಿಂದಿರುಗಿಸತಕ್ಕದ್ದು.

4) ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಿಸಲು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಸಬಾ ಹೋಬಳಿ ಸೋಮನಹಳ್ಳಿ ಗ್ರಾಮದ 7 ಎಕರೆ 21 ಗುಂಟೆ ಜಮೀನನ್ನು ಹಸ್ತಾಂತರಿಸಿರುವುದಕ್ಕೆ ಬದಲಾಗಿ ಕೃಷಿ ಯೋಗ್ಯ 7 ಎಕರೆ 21 ಗುಂಟೆ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಕೃಷಿ ಇಲಾಖೆಗೆ ಒದಗಿಸತಕ್ಕದ್ದು.

5) ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು, ಸದರಿ 7 ಎಕರೆ 21 ಗುಂಟೆ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ: ಆರ್‌ಡಿ 22 ಎಲ್‌ಜಿವ್ಹೆ 2018 ದಿನಾಂಕ 28-11-2018 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎನ್. ಲಕ್ಷ್ಮಣಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಸೇವೆಗಳು ಮತ್ತು ಸಮನ್ವಯ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
7. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
8. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ
9. ತಹಶೀಲ್ದಾರ್, ಮದ್ದೂರು ತಾಲ್ಲೂಕು
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
11. ಜಂಟಿ ಕೃಷಿ ನಿರ್ದೇಶಕರು, ಮಂಡ್ಯ ಜಿಲ್ಲೆ
12. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
13. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು
14. ಸಹಾಯಕ ಕೃಷಿ ನಿರ್ದೇಶಕರು, ಮದ್ದೂರು ತಾಲ್ಲೂಕು
15. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
16. ಸರ್ಕಾರದ ಜಂಟಿ ಕಾರ್ಯದರ್ಶಿ, ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು
17. ಸರ್ಕಾರದ ಉಪ ಕಾರ್ಯದರ್ಶಿ-1 & 2, ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.